155 ಪ್ರಶ್ನೆ ನಿ 330 = 78
4RR
0507

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎ.ಶರವಣ ಇವರು ನಿಯಮ 330ರಡಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ

**ವಿಷಯ :** ಮೈಸೂರು ನಗರದ ಕಲ್ಯಾಣ ಗಿರಿ ಬಡಾವಣೆಯಲ್ಲಿ ದಿ:17-09-2024 ರಂದು ಸಾಮಾಜಿಕ ಸೇವಾ ಕಾರ್ಯಕರ್ತ ಹಾಗೂ ಹಿರಿಯ ನಾಗರೀಕರಾದ ಇವರ ಮನೆಗೆ ಅಕ್ರಮವಾಗಿ ಗೂಂಡಾಗಳು ನುಗ್ಗಿ ಇವರ ಮೇಲೆ ದೈಹಿಕವಾಗಿ ಹಲ್ಲೆ ನಡೆಸಿ ಮನೆಯಲ್ಲಿದ್ದ ಸಾಮಾನುಗಳನ್ನು ಹಾಗೂ ನಗದು ಹಣವನ್ನು ದೋಚಿಕೊಂಡು ಇವರಿಗೆ ಜೀವ ಬೆದರಿಕೆ ಹಾಕಿರುವ ಬಗ್ಗೆ ದಿ: 21-09-2024 ರಂದು ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಗೆ ಸದರಿ ಕೃತ್ಯದ ಕುರಿತು ಖುದ್ದಾಗಿ ದೂರು ನೀಡಿದ್ದರೂ ಸಹ ಸಂಬಂಧಿಸಿದ ಪೊಲೀಸ್ ಅಧಿಕಾರಿಗಳು ತಪ್ಪಿತಸ್ಥರ ವಿರುದ್ಧ ಈವರೆಗೆ ಎಫ್.ಐ.ಆರ್. ದಾಖಲಿಸದೇ ಹಲ್ಲೆಗೊಳಗಾದ ಹಿರಿಯ ನಾಗರೀಕರಿಗೆ ಅನ್ಯಾಯವಾಗಿದ್ದು, ಈ ಪ್ರಕರಣವು ಗಂಭೀರವಾಗಿದ್ದು, ಸಾರ್ವಜನಿಕ ಮಹತ್ವದ ಅತೀ ಜರೂರು ವಿಷಯವಾಗಿರುವುದರಿಂದ ಈ ಬಗ್ಗೆ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳುವ ಕುರಿತು.

**ಉತ್ತರ :** ದಿನಾಂಕ:21.09.2024ರ ಠಾಣಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಸಾಮಾಜಿಕ ಸೇವಾ ಕಾರ್ಯಕರ್ತ ಹಾಗೂ ಹಿರಿಯ ನಾಗರೀಕರು ಉದಯಗಿರಿ ಪೊಲೀಸ್ ಠಾಣೆಗೆ ಹಾಜರಾಗಿ ಯಾವುದೇ ದೂರು ನೀಡಿರುವುದಿಲ್ಲ. ದೂರುದಾರರ ನಿವಾಸವಾದ ಮ.ನಂ.28, ಹುಡ್ಕೋ 5ನೇ ಹಂತ, ಹೆಚ್.ಐ.ಜಿ-ಎ ಕಲ್ಯಾಣಗಿರಿ ನಗರ, ಮೈಸೂರು ಇಲ್ಲಿಗೆ ಪೊಲೀಸ್ ಇನ್ಸ್ ಪೆಕ್ಟರ್, ಉದಯಗಿರಿ ಪೊಲೀಸ್ ಠಾಣೆ ರವರು ಖುದ್ದು ಭೇಟಿ ನೀಡಿ ಪರಿಶೀಲಿಸಲಾಗಿ ಸದರಿ ಮನೆಯಲ್ಲಿ ಸಂಪತ್‌ಕುಮಾರ್ ಎಂಬುವರು ವಾಸವಿರುವುದಿಲ್ಲ ಹಾಗೂ ಇವರ ಬಗ್ಗೆ ಅಕ್ಕಪಕ್ಕದ ಸ್ಥಳೀಯ ನಿವಾಸಿಗಳನ್ನು ವಿಚಾರಿಸಲಾಗಿ ಸಂಪತ್‌ಕುಮಾರ್ ಎಂಬುವವರ ಬಗ್ಗೆ ತಮಗೆ ತಿಳಿದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಪ್ರಕರಣವು ಮೇಲ್ನೋಟಕ್ಕೆ ಸಿವಿಲ್ ಸ್ವರೂಪದ್ದಾಗಿರುವುದರಿಂದ ಸ್ವಯಂ ಪ್ರೇರಿತ ದೂರನ್ನು ದಾಖಲಿಸಿಕೊಂಡಿರುವುದಿಲ್ಲ, ಸದರಿ ವಿಳಾಸದ ಮನೆಯು ಸುಬ್ರಹ್ಮಣ್ಯ ಎಂಬುವವರ ಮನೆ ಎಂಬುದಾಗಿ ತಿಳಿದು ಬಂದಿರುತ್ತದೆ. ನಂತರ ಶ್ರೀ ಸಂಪತ್‌ಕುಮಾರ್‌ರವರ ದೂರವಾಣಿ ಸಂಖ್ಯೆಯನ್ನು ಪಡೆದು ಸಂಪರ್ಕಿಸಿ ವಿಚಾರ ಮಾಡಲಾಗಿ, ತಾನು ಬೆಂಗಳೂರಿನಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ದೂರುದಾರರಿಗೆ ಲಿಖಿತ ದೂರು ನೀಡುವಂತೆ ತಿಳಿಸಿದ್ದರೂ ಸಹ, ಸದರಿಯವರು ಇಲ್ಲಿಯವರೆಗೂ ಠಾಣೆಗಾಗಲೀ ಅಥವಾ ಮೈಸೂರು ನಗರದ ಪೊಲೀಸ್ ಆಯುಕ್ತರ ಕಛೇರಿಗಾಗಲಿ ಯಾವುದೇ ದೂರು ನೀಡಿರುವುದಿಲ್ಲ. ಆದಾಗ್ಯೂ, ದೂರುದಾರರು ಠಾಣೆಗೆ ಹಾಜರಾಗಿ ದೂರು ನೀಡಿದಲ್ಲಿ ಮಾತ್ರ ನಿಯಮಾನುಸಾರ/ಕಾನೂನು ರೀತ್ಯಾ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

---

ಹೆಚ್‌ಡಿ 162 ಎಸ್‌ಎಸ್‌ಟಿ 2025

**(ಡಾ.ಜಿ.ಪರಮೇಶ್ವರ)**
ಗೃಹ ಸಚಿವರು.